


# ಎಂಪೈರ್ ಡ್ರೆಸ್

**ನಮ್ಮ ಹಂತ ಹಂತದ ಟುಟೋರಿಯಲನ್ನು ಅನುಸರಿಸಿ ಮತ್ತು ಸ್ಟೈಲಿಶ್ ಎಂಪೈರ್ ಡ್ರೆಸ್ಸನ್ನು ಆನಂದಿಸಿ.**

## ವಸ್ತುಗಳ ವಿವರ

೬೦ ಇಂಚು ಅಗಲದ ೩ ಮೀಟರ್ ಬಟ್ಟೆ
www.ushasew.com.ನಿಂದ ಡೌನ್ಲೋಡ್ ಮಾಡಿಕೊಂಡಿರುವ ಎಂಪೈರ್ ಡ್ರೆಸ್ ಟೇಂಪ್ಲೇಟ್
ಚಾಲ್ಕ್
ಕತ್ತರಿ
ಬೀಡೆಡ್ ಪಿನ್
ಸ್ಕೇಲ್
ಮೆಶರಿಂಗ್ ಟೇಪ್
ಮ್ಯಾಚಿಂಗ್ ದಾರ
೮ ಇಂಚಿನ ಕನ್ಸೀಲ್ಡ್ ಜಿಪ್
ಊಷಾ ಜನೋಮ್ ಜಿಪ್ಪರ್ ಫುಟ್
ಊಷಾ ಜನೋಮ್ ಪೈಪಿಂಗ್ ಫುಟ್
ನಿಮ್ಮಿಷ್ಟದ ೫ ಮೀಟರ್ ಎಂಬ್ಲಿಶಿಂಗ್ ಲೇಸ್

ಈ ಟುಟೋರಿಯಲಿನಲ್ಲಿ ನಾವು ಬಟ್ಟೆಯನ್ನು ಟೆಂಪ್ಲೇಟಿನಂತೆ ಹೇಗೆ ಕಟ್ ಮಾಡುವುದೆಂದು ಕಲಿಯುತ್ತೇವೆ. ನಾವು ಮೇಲ್ಭಾಗದ ಟಾರ್ಸೋ ಪೀಸನ್ನು ತಯಾರಿಸಿ, ಮುಂಭಾಗ ಮತ್ತು ಹಿಂಭಾಗವನ್ನು ಒಟ್ಟಿಗೆ ಸೇರಿಸುವುದು, ನೆಕ್ ಲೈನನ್ನು ಮುಗಿಸುವುದು, ಸ್ಲೀವನ್ನು ಸೇರಿಸುದು, ಸ್ಕರ್ಟ್ ಭಾಗವನ್ನು ತಯಾರುಮಾಡುವುದು, ಸೈಡ್ ಸೀಮನ್ನು ಹೊಲೆಯುವುದು, ಜಿಪ್ಪರನ್ನು ಸೇರಿಸುವುದು ಮತ್ತು ಲೇಸನ್ನು ಸ್ಲೀವ್ಸಿಗೆ ಮತ್ತು ಬಾಟಮಿಗೆ ಸೇರಿಸುವುದು.

## ಹಂತ ೧ : ಟೆಂಪ್ಲೇಟನ್ನು ಮಾರ್ಕ್ ಮಾಡಿ ಬಟ್ಟೆಯನ್ನು ಕಟ್ ಮಾಡುವುದು





ಬಟ್ಟೆಯನ್ನು ಪೂರ್ತಿಯಾಗಿ ತೆರೆಯಿರಿ. ಅದನ್ನು ಉದ್ದವಾಗಿ ಕೆಳಗಿನಿಂದ ಮತ್ತು ಆಮೇಲೆ ಮೇಲಿನಿಂದ ಟುಟೋರಿಯಲಿನಲ್ಲಿ ತೋರಿಸಿರುವಂತೆ ಮಡಚಿ. ಇದು ಬಟ್ಟೆಯ ತಪ್ಪಾದ ಭಾಗ ಮತ್ತು ಇದು ಬಟ್ಟೆಯ ಸರಿಯಾದ ಭಾಗ

ಮುಂಭಾಗದ ಟೇಂಪ್ಲೇಟನ್ನು ಬಟ್ಟೆಯ ಕೆಳಭಾಗದ ಅರ್ಧದ ಮೇಲೆ ಇಲ್ಲಿ ತೋರಿಸಿರುವಂತೆ ಇಡಬೇಕು. ಟೆಂಪ್ಲೇಟನ್ನು ಬಟ್ಟೆಗೆ ಪಿನ್ ಮಾಡಿ.ಪಿನ್ ಬಟ್ಟೆಯ ಎಲ್ಲಾ ಪದರಕ್ಕೂ ಹೋದಿದೆಯೇ ನೋಡಿಕೊಳ್ಳಿ. ನೀವು ನೋಡಬಹುದು ಮುಂಭಾಗದ ಟೆಂಪ್ಲೇಟ್ ಬಟ್ಟೆಯ ಮಡಚಿರುವ ಭಾಗದ ಮೇಲೆ ಇಡಲಾಗಿದೆ.





ಈಗ ಚಾಲ್ಕಿನ ಸಹಾಯದಿಂದ ಪೂರ್ತಿ ಟೇಂಪ್ಲೇಟನ್ನು ಟ್ರೇಸ್ ಮಾಡಿ. ಕರ್ವ್ಸ್ ಗಳಲ್ಲಿ ಕೆಲಸ ಮಾಡುವಾಗ ಜಾಗ್ರತೆಯಿಂದಿರಿ ಇದಕ್ಕೆ ಸ್ಥಿರವಾದ ಕೈಯಿನ ಅಗತ್ಯವಿರುತ್ತದೆ. ಪೂರ್ತಿ ಟೆಂಪ್ಲೇಟಿನ ಟ್ರೇಸಿಂಗ್ ಮುಗಿಸಿದ ಮೇಲೆ ಅದನ್ನು ಅನ್ ಪಿನ್ ಮಾಡಿ. ಟೇಂಪ್ಲೇಟನ್ನು ಪಕ್ಕಕಿಟ್ಟು ಬಟ್ಟೆಗೆ ಮತ್ತೆ ಎಲ್ಲಾ ಪದರಗಳೂ ಕಟ್ ಮಾಡುವಾಗ ಹಿಡಿದುಕೊಳ್ಳಲು ಪಿನ್ ಮಾಡಿ. ಹುಷಾರಾಗಿ ಟ್ರೇಸ್ ಮಾಡಿರುವ ಗೆರೆಗಳ ಮೇಲೆ ಕಟ್ ಮಾಡಿ ಮತ್ತೆ ನಿಧಾನವಾಗಿ ಕರ್ವ್ ಗಳಲ್ಲಿ ಕತ್ತರಿಸಿ, ಇದು ಪರಿಪೂರ್ಣವಾದ ಮುಂಭಾಗದ ಪೀಸ್ ಪಡೆಯಲು ಅವಶ್ಯಕ. ಮುಂಭಾಗದ ಪೀಸನ್ನು ತೆಗೆದುಕೊಂಡು ಪಕ್ಕಕಿಡಿ. ಈಗ ಹಿಂಭಾಗದ ಟೇಂಪ್ಲೇಟನ್ನು ಬಟ್ಟೆಯ ಮೇಲ್ಭಾಗದ ಮಡಚಿರುವ ಭಾಗದ ಮೇಲೆ ತೋರಿಸಿರುವಂತೆ ಮಡಚಿರುವ ಭಾಗದ ಮೇಲೆ ಇಡಬೇಕು.





ಮುಂಭಾಗದ ಟೇಂಪ್ಲೇಟಿಗೆ ಮಾಡಿದ ವಿಧಾನವನ್ನೇ ಅನುಸರಿಸಿ. ಪಿನ್……ಟ್ರೇಸ್……..ಮತ್ತು ಕಟ್. ಹಿಂಭಾಗದ ಪೀಸನ್ನೂ ಪಕ್ಕಕಿಡಿ.





ಈಗ ನಾವು ಸ್ಕರ್ಟನ್ನು ಕಟ್ ಮಾಡೋಣ. ಬಟ್ಟೆಯನ್ನು ತೆರೆಯಿರಿ ಮತ್ತು ಇಲ್ಲಿ ತೋರಿಸಿರುವಂತೆ ಮತ್ತೆ ಅರ್ಧಕ್ಕೆ ಮಡಚಿ. ನಮ್ಮ ಹತ್ತಿರ ಇನ್ನೂ ಬಲ ಭಾಗ ಬಲ ಭಾಗವನ್ನು ನೋಡುವಂತಿದೆ. ರೂಲರನ್ನು ತೆಗೆದುಕೊಂಡು ಬಟ್ಟೆಯ ಅಗಲಕ್ಕೆ ಅಡ್ಡವಾಗಿ ನೇರ ಗೆರೆಯನ್ನು ಹಾಕಿ. ನೇರೆ ಗೆರೆಯಿಂದ ೨೮ ಇಂಚು ಅಳತೆ ಮಾಡಿ ಮಾರ್ಕ್ ಮಾಡಿ. ೨೮ ಇಂಚನ್ನು ನಿಯಮಿತವಾದ ಅಂತರದಲ್ಲಿ ಮಾರ್ಕ್ ಮಾಡುತ್ತಾ ಹೋಗಿ ಇದು ನಮಗೆ ನೇರ ಗೆರೆಹ್ ಹಾಕಲು ಸಹಾಯವಾಗುತ್ತದೆ. ಈಗ ರೂಲರಿನಿಂದ ನೇರ ಗೆರೆಗಳನ್ನು ಮಾರ್ಕ್ ಮಾಡಿ. ಲೈನ್ ಗಳ ಮೇಲೆ ಕಟ್ ಮಾಡಿ. ಕಟ್ ಮಾಡುವಾಗ ನೀವು ಬಟ್ಟೆಯ ಎರಡೂ ಭಾಗವನ್ನು ಕಟ್ ಮಾಡುವಂತೆ ನೋಡಿಕೊಳ್ಳಿ, ನಮಗೆ ಸ್ಕರ್ಟಿಗಾಗಿ ೨ ಪೀಸ್ ಬಟ್ಟೆಗಳಲು ಬೇಕಾಗುತ್ತದೆ.








ನಂತರ ಬರುವುದು ಸ್ಲೀವ್ಸ್. ಮಿಕ್ಕಿರುವ ಬಟ್ಟೆಯನ್ನು ತೆಗೆದುಕೊಂಡು ಅದರ ಮೇಲೆ ಸ್ಲೀವ್ ಟೆಂಪ್ಲೇಟನ್ನು ಇಡಿ. ಟೆಂಪ್ಲೇಟನ್ನು ಬಟ್ಟೆಗೆ ಪಿನ್ ಮಾಡಿ. ಬಟ್ಟೆಯ ಎರಡು ಪದರಕ್ಕೂ ಪಿನ್ ಹೋಗಿದೆಯೇ ನೋಡಿಕೊಳ್ಳೀ. ಈಗ, ಟೆಂಪ್ಲೇಟಿನ ಔಟ್ ಲೈನನ್ನು ಬಟ್ಟೆಯ ಮೇಲೆ ಚಾಕ್ಲಿನಿಂದ ಟ್ರೇಸ್ ಮಾಡಿ. ಟೆಂಪ್ಲೇಟನ್ನು ಅನ್ ಪಿನ್ ಮಾಡಿ. ಟೆಂಪ್ಲೇಟನ್ನು ಪಕ್ಕಕಿಡಿ. ಬೇಕಾದರೆ, ನೀವು ಮತ್ತೆ ಬಟ್ಟೆಯನ್ನು ಕಟ್ ಮಾಡುವಾಗ ಭದ್ರಗೋಳಿಸಲು ಪಿನ್ ಮಾಡಬಹುಸು. ಮಾರ್ಕ್ ಮಾಡಿರುವ ಗೆರೆ ಮೇಲೆ ಕಟ್ ಮಾಡಿ. ಈ ಕಟಿಂಗ್ ತೊಂಬಾ ಮುಖ್ಯವಾದದ್ದು. ಇದು ನಿಮ್ಮ ಡಿಸೈನನ್ನು ಮಾಡಬಹುದು ಅಥವಾ ಕೆಡಿಸಬಹುದು.


ನಮಗೀಗ ನೆಕ್ ಲೈನಿಗಾಗಿ ಬಯಾಸ್ ಸ್ಟ್ರಿಪ್ ಬೇಕಾಗುತ್ತದೆ. ಮಿಕ್ಕಿರುವ ಬಟ್ಟೆಯನ್ನು ತೆಗೆದುಕೊಳ್ಳಿ, ಸ್ಕೇಲನ್ನು ೪೫ ಡಿಗ್ರಿಯಲ್ಲಿ ಇಟ್ಟುಕೊಂಡು ನೇರವಾದ ಗೆರೆಯನ್ನು ಚಾಕ್ಲಿನಿಂದ ಹಾಕಿ. ಈಗ ಹಾಕಿರುವ ಗೆರೆಯಿಂದ ೧ ೧/೨ ಇಂಚು ಪಾಯಿಂಟನ್ನು ಮಾರ್ಕ್ ಮಾಡಿ. ಬಟ್ಟೆಯ ಮೇಲೆ ೧ ೧/೨ ಇಂಚು ಬೇರೆ ಬೇರೆ ಕಡೆ ಪಾಯಿಂಟ್ ಮಾರ್ಕ್ ಮಾಡಿ, ಇವು ನಮಗೆ ನೇರವಾದ ಗೆರೆ ಹಾಕಲು ಸಹಾಯವಾಗುತ್ತದೆ. ಇದಾದ ಮೇಲೆ, ಸ್ಕೇಲನ್ನು ತೆಗೆದುಕೊಂಡು ಮಾರ್ಕ್ ಮಾಡಿರು ಪಾಯಿಂಟ್ ಗಳನ್ನು ಬೆಳಸಿ ಗೆರೆ ಹಾಕಿ. ಸ್ಟ್ರಿಪನ್ನು ಕತ್ತರಿಯಿಂದ ಕತ್ತರಿಸಿ. ನಮಗೆ ಒಂದೇ ಸ್ಟ್ರಿಪ್ ಬೇಕಾಗಿರುವುದು ಆದ್ದರಿಂದ ನಾವು ಬಟ್ಟೆಯ ಮೇಲ್ಭಾಗವನ್ನು ಮಾತ್ರ ಕಟ್ ಮಾಡುತಿದ್ದೇವೆ.




























### ಹಂತ ೨ : ಮೇಲ್ಭಾಗದ ಟಾರ್ಸೋ ಪೀಸನ್ನು ತಯಾರಿಸುವುದು

ನಮಗೆ ಮುಂಭಾಗ ಮತ್ತು ಹಿಂಭಾಗದ ಮೇಲೆ ಡಾರ್ಟ್ ಗಳು ಬೇಕಾಗುತ್ತದೆ. ಮುಂಭಾಗದ ಪೀಸನ್ನು ತಂದು ಅದನ್ನು ತೆರೆಯಿರಿ. ಮುಂಭಾಗದ ಟೇಂಪ್ಲೇಟನ್ನು ಇಲ್ಲಿ ತೋರಿಸಿರುವಂತೆ ಮುಂಭಾಗದ ಬಲಗಡೆ ಇಡಬೇಕು. ನೀವು ನೋಡವಬಹುದು ಟೆಂಪ್ಲೇಟಿನಲ್ಲಿ ಎರಡು ನಾಚಸ್ ಬಾಟಮಿನಲ್ಲಿ ಮತ್ತು ಒಂದು ಪಾಯಿಂಟ್ ನಾಚಸ್ ಮೇಲೆ ಇದೆ. ಎಲ್ಲಾ ಮೂರು ಪಾಯಿಂಟನ್ನು ಮಾರ್ಕ್ ಮಾಡಿ. ಈಗ ಟೇಂಪ್ಲೇಟನ್ನು ತಿರುಗಿಸಿ ಅದನ್ನು ಎಡಭಾಗದಲಿಟ್ಟು ಮತ್ತೆ ಈ ಮೂರು ಪಯಿಂಟನ್ನು ಮಾರ್ಕ್ ಮಾಡಿ. ಟೆಂಪ್ಲೇಟನ್ನು ತೆಗೆಯಿರಿ. ಮಧ್ಯಭಾಗದಲ್ಲಿರುವ ಎರಡು ನಾಚಸನ್ನು ಸ್ಕೇಲಿನ ಸಹಾಯದಿಂದ ಸೇರಿಸಿ ಚಾಲ್ಕಿನಿಂದ ಮಾರ್ಕ್ ಮಾಡಿ. ಇನ್ನೊಂದು ಕಡೆನೂ ಈ ಪಾಯಿಂಟ್ ಗಳನ್ನು ಸೇರಿಸಿ. ಈ ಮಾರ್ಕಿಂಗ್ ಗಳು ನಮಗೆ ಡಾರ್ಟ್ ಮಾಡಲು ಸಹಾಯವಾಗುತ್ತದೆ. ಹೇಗೆ ಎಂದು ಕೆಲವೇ ನಿಮಿಷದಲ್ಲಿ ನೋಡೋಣ. ಈಗ ಇದೇ ವಿಧಾನವನ್ನು ಹಿಂಭಾಗದ ಪೀಸಿನಲ್ಲೂ ಅನುಸರಿಸಬೇಕು. ಹಿಂಭಾಗದ ಟೆಂಪ್ಲೇಟನ್ನು ಬಟ್ಟೆಯ ಮೇಲೆ ತೋರಿಸಿರುವಂತೆ ಇಡಬೇಕು. ಪಾಯಿಂಟನ್ನು ಮಾರ್ಕ್ ಮಾಡಿ. ಟೆಂಪ್ಲೇಟನ್ನು ಇನ್ನೊಂದು ಕಡೆಗೆ ತಿರುಗಿಸಿ ಮಾರ್ಕ್ . ಈಗ ಕೊನೆಯಲ್ಲಿ ಹೊಲೆಯುವ ಸಮಯ. ಎರಡೂ ಪಿಶ್ ಗಳನ್ನು ಊಷಾ ಜನೋಮ್ ಡ್ರೀಮ್ ಮೇಕರ್ ೧೨೦ ಹೊಲಿಗೆ ಯಂತ್ರಕ್ಕೆ ತೆಗೆದುಕೊಂಡು ಹೋಗಿ. ಮೊದಲು ನಾವು ಮುಂಭಾಗ್ದ ಕೆಲಸ ಮಾಡೋಣ. ಎರಡು ನಾಚಸನ್ನು ಸೇರಿಸಿ ಮತ್ತು ಮೇಲಿನ ಪಾಯಿಂಟನ್ನು ಹಿಂಡಿ. ನಾವು ಈ ಗೆರೆಯ ಮೇಲೆ ಹೊಲೆಯುತ್ತೇವೆ. ಬಟ್ಟೆಯನ್ನು ಪ್ರೆಸ್ಸರ್ ಫುಟಿನ ಕೆಳಗೆ ಹೊಂದಿಸಿ ಮಷೀನ್ ನೇರ ಹೊಲಿಗೆಗೆ ಸೆಟ್ ಆಗಿದೆಯೇ ನೋಡಿಕೊಂಡು ಹೊಲಿಗೆಯ ಉದ್ದವನ್ನು ೨.೬ ಗೆ ಜಾಸ್ತಿ ಮಾಡಿ. ಸ್ಟಾರ್ಟ್ ಬಟನ್ ಒತ್ತಿ ಹೊಲೆಯಲು ಪ್ರಾರಂಭಿಸಿ. ಪ್ರಾರಂಭದಲ್ಲಿ ರಿವರ್ಸ್ ಹೊಲಿಗೆ ಹಾಕಿ. ಪಾಯಿಂಟಿನಿಂದ ನಾಚಿನ ವರೆಗೂ ತೋರಿಸಿದಂತೆ ಹೊಲೆಯಿರಿ. ಕೊನೆಯಲ್ಲೂ ರಿವರ್ಸ್ ಹೊಲಿಗೆ ಹಾಕಿ. ದಾರವನ್ನು ಕತ್ತರಿಸಿ. ನಾವು ಈಗ ಮುಂಭಾಗದ ಮೇಲೆ ಒಂದು ಡಾರ್ಟನ್ನು ಹೊಲೆದಿದ್ದೇವೆ. ನಾವು ಇದೇ ವಿಧಾನವನ್ನು ಇನ್ನೊಂದು ಡಾರ್ಟಿಗೂ ಅನುಸರಿಸೋಣ. ಮುಂಭಾಗದ ಡಾರ್ಟ್ ಗಳು ತಯಾರಾಗಿದೆ. ಈಗ ಹಿಂಭಾಗದ ಕಡೆ ಹೋಗೋಣ. ಮುಂಭಾಗ್ದ ರೀತಿಯಲ್ಲೇ ನಾವು ನಾಚಸನ್ನು ಸೇರಿಸಿ ಗೆರೆಯ ಮೇಲೆ ಹೊಲೆಯಬೇಕು ಎರಡೂ ಕಡೆ ಬಲಭಾಗ ಮತ್ತು ಎಡಭಾಗ. ಡಾರ್ಟ್ಗಳು ನೋಡಲು ಹೀಗೆ ಕಾಣಬೇಕು.

## ಹಂತ ೩ : ಮುಂಭಾಗ ಮತ್ತು ಹಿಂಭಾಗದ ಪೀಸನ್ನು ಭುಜವನ್ನು ಹೊಲೆಯುವುದರೊಂದಿಗೆ ಸೇರಿಸುವುದು

ಹಿಂಭಾಗದ ಪೀಸನ್ನು ಮುಂಭಾಗದ ಮೇಲೆ ತೋರಿಸಿರುವಂತೆ ಇಡಬೇಕು. ಬಲಭಾಗ ಬಲಭಾಗವನ್ನು ನೋಡುವಂತಿರಬೇಕು. ಭುಜವನ್ನು ಸರಿಯಾಗಿ ಮ್ಯಾಚ್ ಮಾಡಿ ಮತ್ತು ಅದನ್ನು ಒಟ್ಟಗೆ ಪಿನ್ ಮಾಡಿ.ನಾವೀಗ ಪಿನ್ ಮಾಡಿರುವ ಭುಜದ ಭಾಗವನ್ನು ಹೊಲೆಯುತ್ತೇವೆ. ಬಟ್ಟೆಯನ್ನು ಸೀವಿಂಗ್ ಮಷೀನಿಗೆ ತೆಗೆದುಕೊಂಡು ಹೋಗಿ. ಪಿನ್ ಮಾಡಿರುವ ಭುಜವನ್ನು ಪ್ರೆಸ್ಸರ್ ಫುಟಿನ ಕೆಳಗೆ ಇಟ್ಟು ಹೊಲೆಯಲು ಪ್ರಾರಂಭಿಸಿ. ಪ್ರಾರಂಭದಲ್ಲಿ ಮತ್ತು ಕೊನೆಯಲ್ಲಿ ರಿವರ್ಸ್ ಹೊಲಿಗೆ ಹಾಕಿ. ಒಂದು ಸಣ್ಣ ಹೊಲಿಗೆ ಗೆರೆಗೂ ರಿವರ್ಸ್ ಹೊಲಿಗೆ ಬಟ್ಟೆಯನ್ನು ಹಿಡಿದುಕೊಳ್ಳಲು ಬಹು ಮುಖ್ಯವಾದದ್ದು. ದಾರವನ್ನು ಕತ್ತರಿಸಿ ಮತ್ತು ಇದೇ ವಿಧಾನವನ್ನು ಇನ್ನೊಂದು ಭುಜಕ್ಕೂ ಪುನರಾವರ್ತಿಸಬೇಕು. ನಿಮ್ಮ ಭುಜದ ಹೊಲಿಗೆ ನೋಡಲು ಹೀಗೆ ಕಾಣಬೇಕು.

## ಹಂತ ೪ : ನೆಕ್ ಲೈನನ್ನು ಮುಗಿಸುವುದು








ಇಲ್ಲಿ ತೋರಿಸಿದಂತೆ ಬಟ್ಟೆಯನ್ನು ತೆರೆಯಿರಿ. ನಾವೀಗ ನೆಕ್ ಲೈನನ್ನು ಮುಗಿಸಬೇಕು, ಬಯಾಸ್ ಸ್ಟ್ರಿಪಿನ ಸಹಾಯದಿಂದ ಅದನ್ನು ನೆಕ್ ಲೈನಿಗೆ ಸೇರಿಸುವುದರೊಂದಿಗೆ. ಹೊಲೆಯಲು ಪ್ರಾರಂಭಿಸೋಣ.ಬಯಾಸ್ ಸ್ಟ್ರಿಪನ್ನು ಅರ್ಧಕ್ಕೆ ಮಡಚಿ, ಮಡಚಿರುವ ಬಯಾಸ್ ಸ್ಟ್ರಿಪನ್ನು ನೆಕ್ಲೈನಿನ ಬಲಭಾಗದ ಮೇಲೆ ತೋರಿಸಿದಂತೆ ಇಡಬೇಕು.ನಾವು ಒಂದು ಇಂಚಿನಷ್ಟು ಬಯಾಸ್ ಸ್ಟ್ರಿಪನ್ನು ಪ್ರಾರಂಭದಲ್ಲಿ ಬಿಟ್ಟಿದ್ದೇವೆ. ಬಟ್ಟೆಗಳನ್ನು ಪ್ರೆಸ್ಸರ್ ಫುಟಿನ ಕೆಳಗೆ ಹೊಂದಿಸಿ ಭ್ಜದ ಭಾಗದ ಗೆರೆಯಿಂದ ಹೊಲೆಯಲು ಪ್ರಾರಂಭಿಸಿ. ಹೊಲೆಯುವಾಗ ಹೆಚ್ಚು ಗಮನವಹಿಸಿ. ನಿಲ್ಲಿಸಿ, ಬಯಾಸ್ ಸ್ಟ್ರಿಪನ್ನು ನೆಕ್ ಲೈನಿಗೆ ಹೊಂದಿಸುತ್ತಾ ಹೋಗಿ. ನೆಕ್ ಲೈನಿನ ಸುತ್ತಲೂ ಹೋಗಿ.







ಕೊನೆಯ ಹತ್ತಿರ ಬಂದಾಗ ನಿಲ್ಲಿಸಿ. ಮೊದಲಿನಲ್ಲಿ ಬಿಟ್ಟ ತೋರಿಸಿದಂತೆ ಮಡಚಿ ಮತ್ತು ಬಯಾಸ್ ಸ್ಟ್ರಿಪಿನ  ಇನ್ನೊಂದು ತುದಿಯನ್ನು ಈ ಮಡಕೆ ಮೇಲೆ ಇಟ್ಟು ಹೊಲೆಯಿರಿ. ಒಮ್ಮೆ ಕೊನೆಯನ್ನು ತಲುಪಿದ ಮೇಲೆ, ದಾರವನ್ನು ಕತ್ತರಿಸಿ. ಹೆಚ್ಚಾದ ಬಯಾಸ್ ಸ್ಟ್ರಿಪ್ ಕೊನೆಯಲ್ಲಿ ಬಿಟ್ಟಿರುವುದನ್ನು ಕತ್ತರಿಯಿಂದ ಸುಲಭವಾಗಿ ಕತ್ತರಿಸಿ. ಹೊಲೆದಿರುವ ಗೆರೆಯ ಮೇಲೆ ಕತ್ತರಿಸಬೇಡಿ. ನೆಕ್ ಲೈನಿನ ಎಲ್ಲಾ ಭಾಗದಲ್ಲೂ ನಾಚಸ್ ಮಾಡಬೇಕು. ನಾಚಸ್ ನೆಕ್ ಲೈನ್ ಮೇಲೆ  ಎಂಪೈರ್ ಡ್ರೆಸ್ ಹಾಕಿಕೊಂಡಾಗ ಸರಿಯಾಗಿ ಕೂರುತ್ತದೆ. ಈಗ ಬಯಸ್ ಸ್ಟ್ರಿಪನ್ನು ತೋರಿಸಿದಂತೆ ಮಡಚಿ.






ಒಂದು ಕೊನೆ ಎಡ್ಜ್ ಹೊಲಿಗೆ ಬಯಾಸ್ ಸ್ಟ್ರಿಪ್ ಫೋಲ್ಡನ್ನು ಹಿಡಿದುಕೊಳ್ಳಲು ಅಗತ್ಯವಾಗಿದೆ. ಫೋಲ್ಡನ್ನು ಪ್ರೆಸ್ಸರ್ ಫೂಟಿನ ಕೆಳಗೆ ಫೋಲ್ಡನ್ನು ಅಲೈನ್ ಮಾಡಿ ಹೊಲೆಯಲು ಪ್ರಾರಂಭಿಸಿ. ಮತ್ತೆ ನೆಕ್ ಲೈನಿನ ಸುತ್ತಲೂ ಹೊಲೆಯಿರಿ, ಫೋಲ್ಡನ್ನು ಹೊಂದಿಸುತ್ತಾ ಹೋಗಿ, ದಾರವನ್ನು ಕತ್ತರಿಸಿ. ನಾವೀಗ ಬಯಾಸ್ ಸ್ಟ್ರಿಪನ್ನು ಡ್ರೆಸಿನ ಒಳಭಾಗದ ಹಿಂಭಾಗಕ್ಕೆ ತೋರಿಸಿರುವಂತೆ ಮಡಚಿ ಎಡ್ಜಿನಲ್ಲಿ ಹೊಲೆಯಿರಿ. ಬಟ್ಟೆಯನ್ನು ಪ್ರೆಸ್ಸರ್ ಫುಟಿನ ಕೆಳಗೆ ಅಲೈನ್ ಮಾಡಿ ಹೊಲೆಯಲು ಪ್ರಾರಂಭಿಸಿ. ಫೋಲ್ಡ್ ನೆಕ್ ಲೈನಿನ ಸುತ್ತಲೂ ಸರಿಯಾಗಿ ಕೂತಿದೆಯೇ ನೋಡಿಕೊಳ್ಳಿ, ಹೆಚ್ಚಾದ ದಾರವನ್ನು ಕತ್ತರಿಸಿ. ಮುಗಿಯಿತು! ನಮ್ಮ ಹತ್ತಿರ ಅಚ್ಚುಕಟ್ಟಾದ ನೆಕ್ ಲೈನ್ ಇದೆ. ಒಮ್ಮೆ ಮುಗಿದ ಮೇಲೆ ಇದು ನೋಡಲು ಹೀಗೆ ಕಾಣಬೇಕು.




## ಹಂತ ೫ : ಸ್ಲೀವ್ಸನ್ನು ಸೇರಿಸಿ ಮತ್ತು ಸ್ಲೀವ್ ಹೆಮ್ಮನ್ನು ಮುಗಿಸುವುದು

ಬಟ್ಟೆಯನ್ನು ಇನ್ನೊಮ್ಮೆ ತೆರೆಯಿರಿ. ಸ್ಲೀವ್ ಪೀಸನ್ನು ತೆಗೆದುಕೊಳ್ಳಿ, ತೋರಿಸಿರುವಂತೆ ಸ್ಲೀವ್ ಪೀಸನ್ನು ಅರ್ಧಕ್ಕೆ ಮಡಚಿ ಮೇಲ್ಭಾಗದಲ್ಲಿ ನಾಚನ್ನು ಕೊಡಬೇಕು. ಒಂದು ಸ್ಲೀವ್ ಪೀಸನ್ನು ತೆಗೆದುಕೊಂಡು ನಾಚನ್ನು ಭುಜದ ಹೊಲಿಗೆಗೆ ಮ್ಯಾಚ್ ಮಾಡಿ. ಸ್ಟಿಚ್ ಲೈನ್ ಮತ್ತು ನಾಚನ್ನು ಅಲೈನ್ ಮಾಡಿ ಪಿನ್ ಮಾಡಿ ಬಲಭಾಗ ಬಲಭಾಗವನ್ನು ನೋಡುವಂತಿರಬೇಕು. ಆರ್ಮ್ ಹೋಲಿನ ಸುತ್ತಲೂ ಪಿನ್ ಮಾಡಿ. ಇದೇ ವಿಧಾನ ಇನ್ನೊಂದು ಕಡೆಗೂ ಮಾಡಬೇಕು. ನಾವು ಆರ್ಮ್ ಹೋಲನ್ನು ಹೊಲೆಯುತ್ತೇವೆ ಮತ್ತು ಸ್ಲೀವನ್ನು ಹೆಮ್ ಮಾಡುತ್ತೇವೆ.






ಪಿನ್ ಮಾಡಿರುವ ಬಟ್ಟೆಯನ್ನು ಪ್ರೆಸ್ಸರ್ ಫುಟಿನ ಕೆಳಗೆ ಇಟ್ಟು ನಿಧಾನವಾಗಿ ಹೊಲೆಯಲು ಪ್ರಾರಂಭಿಸಿ. ಹೊಲೆಯುವಾಗ ಪಿನ್ ಗಳನ್ನು ತೆಗೆಯುತ್ತಾ ಹೋಗಿ, ಇದಾದ ಮೇಲೆ ದಾರವನ್ನು ಕತ್ತರಿಸಿ. ಸ್ಲೀವ್ ನೋಡಲು ಹೀಗೆ ಕಾಣಬೇಕು. ಇನ್ನೊಂದು ಸ್ಲೀವನ್ನು ಇದೇ ರೀತಿ ಮಾಡಬೇಕು. ಈಗ ಸ್ಲಿವ್ ಹೆಮ್ಮಿನ ಕಡೆ ಹೋಗೋಣ.



ಬಟ್ಟೆಯನ್ನು ಅರ್ಧ ಇಂಚು ಎರಡು ಬಾರಿ ಇಲ್ಲಿ ತೋರಿಸಿದಂತೆ ಮಡಚಿ. ಮಡಚಿರುವುದನ್ನು ಪ್ರೆಸ್ಸರ್ ಫುಟಿನ ಕೆಳಗೆ ಇಟ್ಟು ಒಂದು ತುದಿಯಿಂದ ಇನ್ನೊಂದು ತುದಿಗೆ ಹೊಲೆಯುತ್ತಾ ಹೋಗಿ. ಮಧ್ಯದಲ್ಲಿ ನಿಲ್ಲಿಸುತ್ತಾ ಬಟ್ಟೆಯನ್ನು ಮಡಚುತ್ತಾ ಹೋಗಿ, ಅಚ್ಚುಕಟ್ಟಾದ ಹೆಮ್ಮ್ ಬಂದಿದೆಯೇ ನೋಡಿಕೊಳ್ಳಿ, ಹೆಮ್ಮ್ ಮಾಡಿರುವ ಸ್ಲೀವ್ ನೋಡಲು ಹೀಗೆ ಕಾಣಬೇಕು. ನಾವು ಎರಡನೆ ಸ್ಲೀವನ್ನು ಇದೇ ವಿಧಾನದಲ್ಲಿ ಹೊಲೆಯಬೇಕು. ನಾವೀಗ ಸ್ಲೀವಸನ್ನು ಸೇರಿಸಿ ಹೆಮ್ಮ್ ಮಾಡಿದ್ದೇವೆ.



## ಹಂತ ೬ : ಸ್ಕರ್ಟ್ ಭಾಗವನ್ನು ತಯಾರಿಸುವುದು








ನಾವೀಗ ಸ್ಕರ್ಟಿನ ಭಾಗದ ಕೆಲಸ ಮಾಡೋಣ. ನಮ್ಮ ಹತ್ತಿರ ಎರಡು ಸ್ಕರ್ಟ್ ಪೀಸಸ್ ತಯಾರಾಗಿದೆ. ಬಟ್ಟೆಯನ್ನು ತೆರೆಯಿರಿ. ಬಟ್ಟೆ ಮೇಲ್ಭಾಗದ ಟಾರ್ಸೋ ಭಾಗಕ್ಕೆ ಸೇರಿಸಬೇಕು. ಇದನ್ನು ಸೇರಿಸುವ ಮುನ್ನ ಸ್ಕರ್ಟ್ ಪೀಸಿನ ಮೇಲ್ಭಾಗವನ್ನು ತೆಗೆದುಕೊಳ್ಳಬೇಕು. ಸ್ಕರ್ಟಿನ ಎರಡೂ ಪೀಸನ್ನು ತಹೊಲಿಗೆ ಯಂತ್ರಕ್ಕೆ ತೆಗೆದುಕೊಂಡು ಹೋಗಿ. ಗ್ಯಾಥರಿಂಗಾಗಿ ನಿಮಗೆ ಬೇಕಾಗಿರುವುದು ಊಷಾ ಜನೋಮ್ ಗ್ಯಾಥರಿಂಗ್ ಫುಟ್. ರೆಗ್ಯುಲರ್ ಫುಟನ್ನು ಅನ್ ಸ್ಕ್ರು ಮಾಡಿ ಮತ್ತು ಗ್ಯಾಥರಿಂಗ್ ಫುಟನ್ನು ಸ್ಕ್ರೂ ಮಾಡಿ. ಮಷೀನನ್ನು ನೇರ ಹೊಲಿಗೆಗೆ ಮತ್ತು ಹೊಲಿಗೆಯ ಉದ್ದವನ್ನು ೪ ಕ್ಕೆ ಇಡಿ. ಗ್ಯಥರಿಂಗ್ ದಾರಕ್ಕೆ ಟೆಂಷನನ್ನು ಮಾಕಿಮಮ್ ಗೆ ಸೆಟ್ ಮಾಡಬೇಕು., ಈ ಕೇಸಿನಲ್ಲಿ ೯. ಪ್ರೆಸ್ಸರ್ ಫುಟಿನ ಕೆಳಗೆ ಬಟ್ಟೆಯನ್ನು ಅಲೈನ್ ಮಾಡಿ ಸ್ಟಾರ್ಟ್ ಬಟನ್ ಒತ್ತಿ ಮತ್ತು ಇದು ಹೇಗೆ ಜಾದು ಮಾಡುತ್ತದೆಂದು ನೋಡಿ. ಮಷೀನ್ ಅಚುಕಟ್ಟಾದ ಗ್ಯಾಥರನ್ನು ಕೊನೆವರೆಗೂ ಸೃಷ್ಟಿಸುತ್ತದೆ. ಇದಾದ ಮೇಲೆ ದಾರವನ್ನು ಕತ್ತರಿಸಿ. ನಾವು ಇದೇ ಗ್ಯಾಥರಿಂಗ್ ವಿಧಾನವನ್ನು ಸ್ಕರ್ಟಿನ ಇನ್ನೊಂದು ಭಾಗಕ್ಕೂ ಮಾಡಬೇಕು



ಗ್ಯಾಥರ್ ಗಳು ನೋಡಲು ಹೀಗೆ ಕಾಣಬೇಕು. ಇದು ಸುಂದರವಾಗಿದೆ ಅಲ್ಲವೇ.










## ಹಂತ ೪ : ಸ್ಕರ್ಟ್ ಪೀಸನ್ನು ಮೇಲ್ಭಾಗದ ಟಾರ್ಸೋಗೆ ಸೇರಿಸುವುದು

ನಾವೀಗ ಗ್ಯಾಥೆರ್ಡ್ ಬಟ್ಟೆಯನ್ನು ಡ್ರೆಸ್ಸಿನ ಮೇಲ್ಭಾಗಕ್ಕೆ ಸೇರಿಸಬೇಕು. ಬಟ್ಟೆಯ ಒಂದು ಪೀಸ್ ತೆಗೆದುಕೊಂಡು ಅದನ್ನು ಮೇಲ್ಭಾಗದ ಕೊನೆಯ ಬಾಟಮ್ ಎಡ್ಜಿಗೆ ಅಲೈನ್ ಮಾಡಿ, ಬಲಭಾಗ ಬಲಭಾಗವನ್ನು ನೋಡುವಂತಿರಬೇಕು. ಇದನ್ನು ಜಾಗದಲ್ಲಿ ಜೋಡಿಸಿ, ಎಲ್ಲಾ ಕಡೆನೂ ಪಿನ್ ಮಾಡುತ್ತಾ ಹೋಗಿ ಕೊನೆಯನ್ನು ತಲಪುವವರೆಗೂ. ಬಟ್ಟೆಯ ಎರಡು ಪೀಸ್ ಗಳೂ ಸರಿಯಾಗಿ ಅಲೈನ್ ಆಗಿದೆಯೆ ನೋಡಿಕೊಳ್ಳಿ, ಒಂದು ಕಡೆ ಮುಗಿಸಿದ ಮೇಲೆ, ಬಟ್ಟೆಯನ್ನು ತೆರೆದು ಇನ್ನೊಂದು ಸ್ಕರ್ಟ್ ಭಾಗವನ್ನು ಡ್ರೆಸ್ಸಿನ ಹಿಂಭಾಗಕ್ಕೆ ಪಿನ್ ಮಾಡೋಣ. ಬಲಭಾಗ ಬಲಭಾಗವನ್ನು ನೋಡುವಂತಿಟ್ಟು ಪಿನ್ ಮಾಡಿ. ನಾವೀಗ ಹೊಲೆಯಲು ತಯಾರಾಗಿದ್ದೇವೆ. ನಾವೀಗಾಗಲೇ ಪುಟನ್ನು ಮತ್ತೆ ರೆಗ್ಯುಲರ್ ಪುಟಿಗೆ ಬದಲಾಯಿಸಿ ಮಷೀನನ್ನು ನೇರ ಹೊಲಿಗೆಗೆ ಸೆಟ್ ಮಾಡಿದ್ದೇವೆ. ಬಟ್ಟೆಯನ್ನು ಪ್ರೆಸ್ಸರ್ ಪುಟಿನ ಕೆಳಗೆ ಅಲೈನ್ ಮಾಡಿ, ಹೊಲೆಯಲು ಪ್ರಾರಂಭಿಸಿ. ಎರಡೂ ಬಟ್ಟೆ ಪೂರ್ತಿ ಹೊಲೆಯುವವರೆಗೂ ಸರಿಯಾಗಿ ಅಲೈನ್ ಆಗಿದೆಯೇ ನೋಡಿಕೊಳ್ಳಿ, ಒಮ್ಮೆ ತುದಿಯನ್ನು ತಲುಪಿದ ಮೇಲೆ ದಾರವನ್ನು ಕತ್ತರಿಸಿ. ನಾವು ಇದೇ ವಿಧಾನವನ್ನು ಇನ್ನೊಂದು ಕಡೆಗೂ ಮಾಡಬೇಕು. ಬಟ್ಟೆಯನ್ನು ಅಲೈನ್ ಮಾಡಿ ಹೊಲೆಯಿರಿ. ದಾರವನ್ನು ಕತ್ತರಿಸಿ. ನಮ್ಮ ಮೇಲ್ಭಾಗದ ಟಾರ್ಸೋ ಭಾಗ ಈಗ ಬಾಟಮಿಗೆ ನೀವು ನೋಡುವಂತೆ ಕನೆಕ್ಟ್ ಆಗಬಹುದು. ಹೊಲಿಗೆಗಳು ಹೀಗೆ ಕಾಣಬೇಕು.









## ಹಂತ ೫ : ಸ್ಲೀವ್ಸ್, ಬಾಟಮ್ ಮತ್ತು ಸೈಡನ್ನು ಜಿಪ್ಪರಿನೊಂದಿಗೆ ಮುಗಿಸುವುದು

ನಾವು ಸ್ಲೀವನ್ನು ಲೇಸಿನಿಂದ ಅಲಂಕರಿಸೋಣ. ಪೂರ್ತಿ ಸ್ಲೀವಿನ ಅಳತೆಯನ್ನು ಮಾಡಿ ಮತ್ತು ಲೇಸನ್ನು ಅದೇ ಅಳತೆಗೆ ಕಟ್ ಮಾಡಿ. ಲೇಸನ್ನು ತೋರಿಸಿರುವಂತೆ ಪಿನ್ ಮಾಡಿ. ಇದೇ ವಿಧಾನವನ್ನು ಎರಡನೆ ಸ್ಲೀವಿಗೂ ಮಾಡಿ. ಲೇಸನ್ನು ಅಳತೆ ಮಾಡಿ, ಕಟ್ ಮಾಡಿ ಮತ್ತು ಪಿನ್ ಮಾಡಿ.

ಈಗ ಸೈಡ್ ಸೀಮಿನ ಕಡೆ ಹೋಗೋಣ. ಸ್ಲೀವನ್ನು ಬಲಭಾಗ ಬಲಭಾಗವನ್ನು ನೋಡುವಂತಿಟ್ಟು ಆರ್ಮ್ ಹೋಲನ್ನು ಮ್ಯಾಚ್ ಮಾಡಿ. ಆರ್ಮ್ ಹೋಲಿಗೆ ಪಿನ್ ಮಾಡಿ. ನಂತರ ಕೆಳಕ್ಕೆ ಹೋಗಿ ವೇಸ್ಟ್ ಲೈನನ್ನು ಮ್ಯಾಚ್ ಮಾಡಿ ಜಾಗದಲ್ಲಿ ಪಿನ್ ಮಾಡಿ. ಮುಂದೆ, ಸೈದ್ ಸೀಮನ್ನು ಮ್ಯಾಚ್ ಮಾಡುತ್ತಾ ಹೋಗಿ ಡ್ರೆಸ್ಸಿನ ಕೊನೆಯನ್ನು ತಲಪುವವರೆಗೂ . ಮೊದಲ ಕಡೆಯನ್ನು ಒಮ್ಮೆ ಮುಗಿಸಿದ ಮೇಲೆ ಇದೇ ವಿಧಾನವನ್ನು ಇನ್ನೊಂದು ಕಡೆಗೂ ಮಾಡಿ.

ಈ ಭಾಗದಲ್ಲಿ ಹೇಗಿದ್ದರೂ ನಾವು ಜಿಪ್ಪರನ್ನು ಸೇರಿಸುತ್ತೇವೆ. ನಾವು ೮ ಇಂಚು ಕನ್ಸೀಲ್ಡ್ ಜಿಪ್ಪರನ್ನು ಬಳಸುತ್ತೇವೆ. ಆರ್ಮ್ ಹೋಲಿನಿಂದ ೧ ೧/೨ ಇಂಚು ಅಳತೆ ಮಾಡಿ ಚಾಲ್ಕಿನಿಂದ ಮಾರ್ಕ್ ಮಾಡಿ. ಈ ಪಾಯಿಂಟ್ ಜಿಪ್ಪರಿನ ಪ್ರಾರಂಭದ ಭಾಗ. ಈಗ ಜಿಪ್ಪರಿನ ಇನ್ನೊಂದು ತುದಿಗೆ ನಾವು ಜಿಪ್ಪರ್ ಮುಗಿಯುವ ಒಂದು ಇಂಚು ಮೊದಲು ಮಾರ್ಕ್ ಮಾಡಬೇಕು. ಚಾಲ್ಕನ್ನು ಬಳಸಿ ಪಾಯಿಂಟನ್ನು ಮಾರ್ಕ್ ಮಾಡಿ. ಇದು ನಮ್ಮ ಓಪೆನಿಂಗ್. ಈಗ ಜಿಪನ್ನು ಪಿನ್ ಮಾಡೋಣ.




















ಜಿಪಿನ ಬಲಭಾಗ ಡ್ರೆಸ್ಸಿನ ಬಟ್ಟೆಯ ಬಲಭಾಗದ ಮೇಲೆ ಇಡಬೇಕು. ಜಿಪಿನ ಒಂದು ಸೈಡನ್ನು ಬಟ್ಟೆಯ ಕೊನೆಗೆ ತೋರಿಸಿರುವಂತೆ ಪಿನ್ ಮಾಡಿ. ಜಿಪಿನ ಇನ್ನೊಂದು ಕಡೆಯನ್ನು ಡ್ರೆಸ್ಸಿನ ಮೇಲ್ಭಾಗದ ಪೀಸಿಗೆ ಸೇರಿಸಬೇಕು.ಬಲಭಾಗ ಬಲಭಾಗವನ್ನು ನೋಡುವಂತಿರಬೇಕು. ಪಿನ್ ಮಾಡಿರುವ ಜಿಪ್ ನೋದಲು ಹೀಗೆ ಕಾಣಬೇಕು.

ಹೊಲೆಯಲು ಪ್ರಾರಂಭಿಸೋಣ !



ಮೊದಲು ಲೇಸನ್ನು ಹೊಲೆಯೋಣ ಆದ್ದರಿಂದ ನಾವು ದಾರವನ್ನು ಲೇಸಿಗೆ ಮ್ಯಾಚಾಗುವಂತೆ ಬದಲಾಯಿಸಬೇಕು. ನಾವು ರೆಗ್ಯುಲರ್ ಪ್ರೆಸ್ಸರ್ ಫುಟನ್ನೂ ಬದಲಾಯಿಸಿ ಪೈಪಿಂಗ್ ಫುಟನ್ನು ಹಾಕಬೇಕು. ಇದಾದ ಮೇಲೆ, ಬಟ್ಟೆಯನ್ನು ಪ್ರೆಸರ್ ಫುಟಿಗೆ ಅಲೈನ್ ಮಾಡಿ ಹೊಲೆಯಲು ಪ್ರಾರಂಭಿಸಿ. ಲೇಸಿನ ಒಂದು ತುದಿಯಿಂದ ಪ್ರಾರಂಭಿಸಿ ಇನ್ನೊಂದು ತುದಿಗೆ ಹೊಲೆಯಿರಿ. ಮಷೀನನ್ನು ನಿಧಾನಗತಿಯಲ್ಲಿ ಹೋಗಿ ಅತ್ಯುತ್ತಮವಾದ ಹೊಲಿಗೆಯನ್ನು ಪಡೆಯಲು, ಇದಾದ ಮೇಲೆ ದಾರವನ್ನು ಕತ್ತರಿಸಿ ಮತ್ತು ಇದೇ ವಿಧಾನವನ್ನು ಲೇಸಿನ ಇನ್ನೊಂದು ಕಡೆನೂ ಅನುಸರಿಸಬೇಕು.

ಸ್ಲಿವಿನ ಎರಡು ತುದಿಯನ್ನು ಒಟ್ಟಿಗೆ ಸೇರಿಸಬೇಕು., ಅದಕ್ಕೆ ಲೇಸಿನ ತುದಿಯಿಂದ ಸ್ವಲ್ಪ ಮುತ್ತನ್ನು ತೆಗೆಯಿರಿ. ಇದು ಸೀಮಿಲ್ಲದೆ ಸ್ಲೀವನ್ನು ಹೊಲೆಯಲು ಸುಲಭವಾಗುತ್ತದೆ. ಪ್ರೆಸ್ಸರ್ ಫುಟನ್ನು ರೆಗ್ಯುಲರ್ ಫುಟಿಗೆ ಬದಲಾಯಿಸಿ. ಸ್ಲಿವಿನ ಎರಡು ಕಡೆಯನ್ನು ಸೇರಿಸಿ., ಬಲಭಾಗ ಬಲಭಾಗವನ್ನು ನೋಡುವಂತಿರಬೇಕು. ಅದನ್ನು ಪ್ರೆಸ್ಸರ್ ಫುಟಿನ ಕೆಳಗೆ ಅಲೈನ್ ಮಾಡಿ ಹೊಲೆಯಲು ಪ್ರಾರಂಭಿಸಿ. ಪ್ರಾರಂಭದಲ್ಲಿ ರಿವರ್ಸ್ ಹೊಲಿಗೆ ಹಾಕಿ. ಸ್ಲೀವಿನಿಂದ ಪ್ರಾರಂಭಿಸಿ ಡ್ರೆಸ್ಸಿನ ಬಾಟಮಿನವರೆಗೂ ಹೊಲೆಯಿರಿ. ಆರ್ಮ್ ಹೋಲಿನ ಹತ್ತಿರ ಮತ್ತು ಗ್ಯಾಥರ್ಸನ ಹತ್ತಿರ ನಿಧಾನ ಮಾಡಿ ಎರಡು ಮುಂಭಾಗ ಮತ್ತು ಹಿಂಭಾಗದ ಪೀಸ್ ಅಲೈನ್ ಆಗಿದೆಯೇ ನೋಡಿಕೊಳ್ಳಿ, ಇದಾದ ಮೇಲೆ ದಾರವನ್ನು ಕತ್ತರಿಸಿ. ಸೀಮ್ ನೋಡಲು ಹೀಗೆ ಕಾಣಬೇಕು. ಈಗ ಡ್ರೆಸ್ಸಿನ ಇನ್ನೊಂದು ಕಡೆಯನ್ನು ಹೊಲೆಯೋಣ.

ಡ್ರೆಸ್ಸಿನ ಬಾಟಮಿನಿಂದ ಪ್ರಾರಂಭಿಸಿ ಮೇಲ್ಭಾಗಕ್ಕೆ ಹೋಗೋಣ. ಒಮ್ಮೆ ಜಿಪ್ಪರ್ ಮಾರ್ಕಿಂಗನ್ನು ತಲುಪಿದಾಗ ನಿಲ್ಲಿಸಿ ಕೆಲವು ರಿವರ್ಸ್ ಹೊಲಿಗೆಯನ್ನು ಹಾಕಿ. ದಾರವನ್ನು ಕತ್ತರಿಸಿ. ಈಗ ಮತ್ತೆ ಇನ್ನೊಂದು ಮಾರ್ಕಿಂಗಿಗನ್ನು ಹೊಲೆಯಬೇಕು. ದಾರವನ್ನು ಕತ್ತರಿಸಿ. ಈಗ ಮತ್ತೆ ಇನ್ನೊಂದು ಮಾರ್ಕಿನಿಂದ ಹೊಲೆಯಲು ಪ್ರಾರಂಭಿಸಿ ಸ್ಲಿವಿನ ಕೊನೆವರೆಗೂ ಹೊಲೆಯಿರಿ. ಇದಾದ ಮೇಲೆ ದಾರವನ್ನು ಕತ್ತರಿಸಿ.

ನಂತರ ಜಿಪ್ಪರ್ ಫುಟ್. ಪ್ರೆಸ್ಸರ್ ಫೂಟನ್ನು ಗೆತೆದು ಜಿಪ್ಪರ್ ಫುಟನ್ನು ಹಾಕಿ. ನಾವು ಮತ್ತೆ ಫುಟಿನ ಬಲಭಾಗದ ತುದಿಯನ್ನು ಬಟ್ಟೆಗೆ ಅಲೈನ್ ಮಾಡಿ ಮತ್ತೆ ನಾವು ಫುಟನ್ನು ಆದಕ್ಕೆ ಹೊಂದುವಂತೆ ಸೇರಿಸಬೇಕು. ಬಟ್ಟೆಯನ್ನು ಫುಟಿನ ಕೆಳಗೆ ಇಟ್ಟು ಹೊಲೆಯಲು ಪ್ರಾರಂಭಿಸಿ. ಹೊಲೆಯುತ್ತಿರುವಾಗ ಪಿನ್ ಗಳನ್ನು ತೆಗೆಯುತ್ತಾ ಹೋಗಿ. ಒಮ್ಮೆ ಜಿಪ್ಪರಿನ ತುದಿಯನ್ನು ತಲುಪಿದಾಗ ನಿಲ್ಲಿಸಿ ದಾರವನ್ನು ಕತ್ತರಿಸಿ. ಜಿಪನ್ನು ಓಪೆನ್ ಮಾಡಿ ಮತ್ತು ನಾವು ಇನ್ನೊಂದು ಕಡೆ ಹೊಲೆಯೋಣ. ಬಟ್ಟೆಯನ್ನು ಪ್ರೆಸ್ಸರ್ ಫುಟಿನ ಕೆಳಗೆ ಇಟ್ಟು ಹೊಲೆಯಲು ಪ್ರಾರಂಭಿಸಿ ಕೊನೆಯವರೆಗೂ ಹೋಗಿ. ನಮ್ಮ ಜಿಪಿನ ಮೊದಲನೆ ಜೊತೆಯ ಹೊಲಿಗೆ ತಯಾರಾಗಿದೆ. ನಾವೀಗ ಜಿಪಿನ ಹಲ್ಲಿನ ಭಾಗದ ಹತ್ತಿರ ಹೊಲೆಯಬೇಕು. ಜಿಪನ್ನು ಪ್ರೆಸ್ಸರ್ ಫುಟಿನ ಕೆಳಗೆ ಅಲೈನ್ ಮಾಡಿ ಹೊಲೆಯಲು ಪ್ರಾರಂಭಿಸಿ. ಹಲ್ಲಿನ ಆದೆಷ್ಟು ಹತ್ತಿರ ಹೊಲೆಯಿರಿ. ಸ್ಥಿರವಾಗಿ ಹೋಗಿ ಮತ್ತು ನಿಮ್ಮ ಹೊಲಿಗೆಗಳು ನೇರವಾಗಿರಲಿ. ಇದಾದ ಮೇಲೆ ದಾರವನ್ನು ಕತ್ತರಿಸಿ. ಇದೇ ವಿಧಾನವನ್ನು ಇನ್ನೊಂದು ಕಡೆಗೂ ಅನುಸರಿಸಿ. ಜಿಪ್ ಹೊಲೆದ ಮೇಲೆ ನೋಡಲು ಹೀಗೆ ಕಾಣಬೇಕು.




ಕೊನೆಯ ಸಣ್ಣ ಕೆಲದ ಎಂದರೆ ಜಿಪಿನ ಮೇಲ್ಭಾಗವನ್ನು ಲಾಕ್ ಮಾಡುವುದು ಅದನ್ನು ಜಿಪಿನ ಅಗಲಕ್ಕೆ ಹೊಲಿಗೆಯನ್ನು ಹಾಕಬೇಕು. ಈಗ ಮತ್ತೆ ರೆಗ್ಯುಲರ್ ಫುಟನ್ನು ಹಾಕಿ. ಬಟ್ಟೆಯನ್ನು ಪ್ರೆಸ್ಸರ್ ಫುಟಿನ ಕೆಳಗೆ ಇಟ್ಟು ಅಡ್ಡವಾಗಿ ಹೊಲೆಯಿರಿ. ನಿಮ್ಮ ಹೊಲಿಗೆಗಳು ನೋಡಲು ಹೀಗೆ ಕಾಣಬೇಕು.

ಎಂಪೈರ್ ಡ್ರೆಸ್ಸನ್ನು ಒಳಗಿಂದ ಹೊರಕ್ಕೆ ತಿರುಗಿಸಿ ನಾವು ಈಗ ಬಾಟಮ್ ಹೆಮ್ಮಿನ ಕೆಲಸ ಮಾಡೋಣ. ೧/೪ ಇಂಚು ಎರಡು ಬಾರಿ ಮಡಚಿ. ಫೋಲ್ಡನ್ನು ಪ್ರೆಸ್ಸರ್ ಫುಟಿನ ಕೆಳಗೆ ಇಟ್ಟು ಹೊಲೆಯಲು ಪ್ರಾರಂಭಿಸಿ. ಬಾಟಮಿನ ಸುತ್ತಲೂ ಹೊಲೆಯಿರಿ ಮತ್ತು ಹೆಮ್ಮ್ ಮಾಡಿ. ಬಾಟಮನ್ನು ಮಡಚುತ್ತ ಹೋಗಿ ಮತ್ತು ಹೊಲಿಗೆಗಳು ಅಚ್ಚುಕಟ್ಟಾಗಿರುವಂತೆ ನೋಡಿಕೊಳ್ಳಿ ಇದಾದ ಮೇಲೆ ದಾರವನ್ನು ಕತ್ತರಿಸಿ.








ಲೇಸ್ ಬಾಟಮಿನ ಕೆಳಗೆ ಕೂರುತ್ತದೆ. ನಾವು ರೆಗ್ಯುಲರ್ ಪ್ರೆಸ್ಸರ್ ಫೂಟನ್ನು ತೆಗೆದು ಪೈಪಿಂಗ್ ಫುಟನ್ನು ಹಾಕಬೇಕು. ಲೇಸನ್ನು ಡ್ರೆಸ್ಸಿನ ಬಾಟಮಿನಲ್ಲಿ ಇಟ್ಟು ಹೊಲೆಯಲು ಪ್ರಾರಂಭಿಸಿ. ಕೊನೆಯನ್ನು ಓಪನಾಗಿ ಬಿಡಿ. ದಾರವನ್ನು ಕತ್ತರಿಸಿ ಮತ್ತು ಲೇಸಿನ ಇನ್ನೊಂದು ಕಡೆಗೆ ಹೋಗೋಣ. ಸುತ್ತಲೂ ಹೊಲೆಯಿರಿ. ಕೊನೆಯನ್ನು ತಲುಪಿದಾಗ ೧/೨ ಒಂಚಿನಷ್ಟು ಮಡಚಿ ಮತ್ತು ತೋರಿಸಿದಂತೆ ಲೇಸಿನ ಮೇಲೆ ಓವರ್ಲ್ಯಾಪ್ ಮಾಡಿ. ನಾವು ಕೆಲವು ಮುತ್ತುಗಳನ್ನು ತೆಗೆಯ ಬೇಕಾಗಬಹುದು .ಪಿವಟಿಂಗನ್ನು ಮೂಲೆಗಳಲ್ಲಿ ಮಾಡಿ.  ಮುಗಿಸಿದ ಮೇಲೆ ದಾರವನ್ನು ಕತ್ತರಿಸಿ. ನಾವು ನೆಕ್ಲೈನನ್ನು ಮುಗಿಸಿದ್ದೇವೆ, ವೇಸ್ಟ್, ಬಾಟಮ್ ಹೆಮ್ಮ್ ಮತ್ತು ಜಿಪ್ಪರನ್ನು ಮುಗಿಸಿದ್ದೇವೆ.



ಇದು ಸುಲಭವಾಗಿತ್ತಲ್ಲವೇ?  ನಿಮ್ಮ ಎಂಪೈರ್ ಡ್ರೆಸ್ ಈಗ ತಯಾರಾಗಿದೆ. ನಿಮಗೀಗ ನಿಮ್ಮ ಡಿನ್ನರ್ ಡೇಟಿಗೆ ಏನನ್ನು ಹಾಕಿಕೊಳ್ಳಬೇಕೆಂದು ತಿಳಿದಿದೆ. ಮುಂದೆ ಏನನ್ನು ನೋಡಬೇಕೆಂದು ಬಯಸುತ್ತೀರೆಂದು ಕಮೆಂತಿನಲ್ಲಿ ನಮಗೆ ತಿಳಿಸಿ. ಮತ್ತು ನಿಮ್ಮ ಟೇಲರ್ ಸ್ನೇಹಿತರೊಂದಿಗೆ ಇದನ್ನು ಶೇರ್ ಮಾಡುವುದನ್ನು ಮರೆಯಬೇಡಿ.